## ನಿಮ್ಮೊಡನೆ

# ಸ್ವಚ್ಛತೆಯ ಪಾಠಕ್ಕೆ ಭ್ರಷ್ಟತೆಯ ಕಳಂಕ

ಆರೋಗ್ಯ ಸಂರಕ್ಷಣೆಯ ಸೂತ್ರವಾಗಿ ಹೆಚ್ಚು ನೀರು ಕುಡಿಯಿರಿ ಎಂದು ಚಿಕ್ಕ ಮಕ್ಕಳಿಗೆ ಬೋಧಿಸುವ ಪ್ರಾಥಮಿಕ ಶಾಲಾ ಶಿಕ್ಷಕಿಯರು ಶಾಲೆಯ ಅವಧಿಯಲ್ಲಿ ಸ್ವತಃ ತಾವೇ ನೀರು ಕುಡಿಯಲಾಗದ ಸ್ಥಿತಿಯಲ್ಲಿರುವುದು ವಿಪರ್ಯಾಸದ ಸಂಗತಿಯಾದರೂ ವಾಸ್ತವ. ಹಳ್ಳಿಗಾಡಿನ ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲದಿರುವುದು ಶಿಕ್ಷಕಿಯರು ನೀರನ್ನು ವರ್ಜಿಸುವುದಕ್ಕೆ ಕಾರಣ ಎಂಬುದು ಮಹಿಳೆಯರ ಬಗ್ಗೆ ಆಡಳಿತ ವ್ಯವಸ್ಥೆಯು ತಾಳಿರುವ ನಿಷ್ಕಾಳಜಿಗೂ ನಿದರ್ಶನ. ಬಡತನದ ಕಾರಣ ಮುಂದೆ ಹೆಚ್ಚು ಓದಲಾಗದ ಹಳ್ಳಿಗಾಡಿನ ಹೆಣ್ಣುಮಕ್ಕಳು ಶಿಕ್ಷಕ ತರಬೇತಿಯನ್ನು ಮುಗಿಸಿ ಶಿಕ್ಷಕಿಯರಾಗಿ ಆಯ್ಕೆಯಾಗುತ್ತಾರೆ. ಹಳ್ಳಿಗರೆಂದ ಮಾತ್ರಕ್ಕೆ ಅವರು ಕಷ್ಟ ಸಹಿಷ್ಣುಗಳೂ ಆಗಿರುತ್ತಾರೆ; ಶೌಚಾಲಯವಿಲ್ಲದ ವಾತಾವರಣಗಳಲ್ಲಿಯೂ ಅವರು ತಮ್ಮ ಕರ್ತವ್ಯ ನಿರ್ವಹಿಸಬಲ್ಲರು ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಭಾವಿಸಿರುವಂತಿದೆ. ಶೌಚಾಲಯಕ್ಕೆ ಹೋಗಬೇಕಾದ ಒತ್ತಡ ಬಾರದಂತಿರಲು ನೀರನ್ನೇ ಕುಡಿಯದಿರುವ ಪರಿಸ್ಥಿತಿ ಮುಂದೆ ಅವರ ಆರೋಗ್ಯದ ಮೇಲೆ ಎಷ್ಟರಮಟ್ಟಿಗೆ ಹಾನಿ ಮಾಡಬಹುದೆಂಬುದನ್ನು ತಿಳಿಯದಷ್ಟು ಅಮಾನವೀಯವಾಗಿದೆಯೇ ಶಿಕ್ಷಣ ಇಲಾಖೆ?

ಇಂಥ ಪರಿಸ್ಥಿತಿ ಶಿಕ್ಷಣ ಇಲಾಖೆಯೊಂದರ ಅಮಾನವೀಯ ಮುಖವನ್ನು ಮಾತ್ರವೇ ತೋರಿಸುವುದಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ನೀಡಲಾಗುವ ಜನರ ತೆರಿಗೆಯ ಹಣ ಅಗತ್ಯ ಸೌಕರ್ಯಗಳಿಗೆ ಬಳಕೆಯಾಗುತ್ತಿಲ್ಲ ಎಂಬುದನ್ನೂ ತೋರಿಸುತ್ತದೆ. ಈಚಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಮೂಲಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿವೆ. ಉಚಿತ ಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿ ಊಟ ಅಷ್ಟೇ ಅಲ್ಲ, ಅಗತ್ಯ ಇರುವಷ್ಟು ಕೊಠಡಿಗಳನ್ನು ಕಟ್ಟಿಕೊಳ್ಳಲು ಹಣವನ್ನೂ ಒದಗಿಸುತ್ತಿವೆ. ಹಣದ ಬಳಕೆಯನ್ನು ನೋಡಿಕೊಳ್ಳಲು ಅಧಿಕಾರಿಗಳ ಪಡೆ. ಜನಪ್ರತಿನಿಧಿಗಳೂ, ಸಚಿವರೂ ಕಾಲಕಾಲಕ್ಕೆ ಪರಿಶೀಲನೆ ನಡೆಸುವ ವ್ಯವಸ್ಥೆ. ಆದರೂ ಗ್ರಾಮೀಣ ಭಾಗದ ಎಷ್ಟೋ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶೌಚಾಲಯಗಳೇ ಇಲ್ಲ. ಶಾಲೆಗೊಂದು ಬಾವಿ ಒದಗಿಸಲು ಹಣ ಖರ್ಚಾಗಿರುತ್ತದೆ. ಆದರೆ ಬಾವಿಯೇ ಇರುವುದಿಲ್ಲ. ಅಲ್ಲಿ ಕೆಲಸ ಮಾಡಬೇಕಿರುವ ಶಿಕ್ಷಕಿಯರು ಕಷ್ಟ ಸಹಿಷ್ಣುಗಳಾಗಿದ್ದು ಮುಂದಿನ ಪ್ರಜೆಗಳನ್ನು ರೂಪಿಸುವ ಗುರುತರ ಹೊಣೆಯನ್ನು ನಿರ್ವಹಿಸಬೇಕು. ಇದು ವ್ಯವಸ್ಥೆಯ ಅಮಾನವೀಯ ಮುಖವನ್ನಷ್ಟೇ ಅಲ್ಲದೆ, ಮಾನವ ಹಕ್ಕು ಉಲ್ಲಂಘನೆಯಂಥ ಗಂಭೀರ ವರ್ತನೆಯೂ ಆಗಿದೆ.

ಶೌಚಾಲಯ ಬಳಕೆ ಇಲ್ಲದಿರುವುದು ಅನೇಕ ಸಾಂಕ್ರಾಮಿಕ ರೋಗಗಳಿಗೆ ಕಾರಣ ಎಂಬುದು ಆರೋಗ್ಯ ಇಲಾಖೆಯ ಘೋಷಣೆಯ ಹಂತಕ್ಕೆ ಉಳಿದರೆ ಪ್ರಯೋಜನವಿಲ್ಲ. ಈ ಪರಿಸ್ಥಿತಿಯ ಸುಧಾರಣೆಗೆ ಸರ್ಕಾರ ಹಣ ವೆಚ್ಚ ಮಾಡುವುದು ತಪ್ಪಿಲ್ಲ. ಶೌಚಾಲಯ ಬಳಕೆಯನ್ನು ಕಡ್ಡಾಯಗೊಳಿಸಲು ವಸತಿ ಪ್ರದೇಶಗಳಲ್ಲಿ ಪ್ರತ್ಯೇಕ ಕಟ್ಟಡ ನಿರ್ಮಾಣಕ್ಕೆ ಹಣ ವೆಚ್ಚವಾಗಿದೆ. ಹಳ್ಳಿಗಳಲ್ಲಿ ಸ್ವಂತ ಶೌಚಾಲಯ ಹೊಂದಲು ಉಚಿತವಾಗಿ ಇಲ್ಲವೇ ರಿಯಾಯಿತಿ ದರದಲ್ಲಿ ಶೌಚಾಲಯ ಸಾಮಗ್ರಿಗಳನ್ನು ಒದಗಿಸುವ ನೆಪದಲ್ಲಿಯೂ ಹಣ ಖರ್ಚಾಗಿದೆ. ಮನೆಯಲ್ಲಿ ಶೌಚಾಲಯ ವ್ಯವಸ್ಥೆ ಮಾಡಿಕೊಳ್ಳದಿದ್ದರೆ ಯಾವುದೇ ಚುನಾವಣೆಯಲ್ಲಿಯೂ ಸ್ಪರ್ಧಿಸಲಾಗದು ಎಂಬ ದಂಡನಾತ್ಮಕ ನಿಯಮಗಳೂ ಜಾರಿಯಲ್ಲಿವೆ. 'ಸ್ವಚ್ಛಗ್ರಾಮ' ಯೋಜನೆಯಡಿ ಮಂಜೂರಾದ ಹಣ ದುರುಪಯೋಗವಾದ ಬಗ್ಗೆ ತನಿಖೆ ನಡೆಸಿದ ಸುದ್ದಿ ಜನರ ನೆನಪು ಬಹು ಕಾಲ ಉಳಿಯದು ಎಂಬ ಗಾದೆಯಲ್ಲಿ ಹುದುಗಿಹೋಗಿದೆ.

ಕುಟುಂಬದ ಆರೋಗ್ಯ ಸಂರಕ್ಷಣೆಯಲ್ಲಿ ಮಹಿಳೆ ವಹಿಸುವ ಪಾತ್ರ ಹೆಚ್ಚಿನದು. ಆದರೆ ಮಹಿಳೆಯ ಆರೋಗ್ಯ ಕುರಿತಾಗಿ ಇಡೀ ವ್ಯವಸ್ಥೆಯದು ತುಂಬು ನಿರ್ಲಕ್ಷ್ಯ. ಸರ್ಕಾರದ ಬಸ್ ನಿಲ್ದಾಣಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳಿವೆ. ಆದರೆ ಅವನ್ನು ಬಳಸುವುದಕ್ಕೆ ಮಹಿಳೆಯರು ಹಣ ತೆರಬೇಕು. ಪುರುಷರಿಗೆ ಈ ಪಾವತಿಯ ಷರತ್ತು ಇಲ್ಲ. ಮಹಿಳೆಯರು ಹಣ ತೆತ್ತರೂ ಅಲ್ಲಿ ಸ್ವಚ್ಛತೆಯ ಭರವಸೆ ಇಲ್ಲ. ಸರ್ಕಾರದ ಸೇವೆಯಲ್ಲಿ ಇರುವ ಶಿಕ್ಷಕಿಯರು, ಬಸ್ ಕಂಡಕ್ಟರ್ ಮಹಿಳೆಯರ ಕನಿಷ್ಠ ಅಗತ್ಯಗಳ ಬಗ್ಗೆ ಅಮಾನವೀಯವಾಗಿ ವರ್ತಿಸುವ ಆಡಳಿತ ಸಾರ್ವಜನಿಕರ ಬಗ್ಗೆ ಕಾಳಜಿ ವಹಿಸುವುದೆಂದು ನಿರೀಕ್ಷಿಸುವುದೇ ಸರಿಯಲ್ಲವೇನೋ...

■ ಲಕ್ಷ್ಮಣ ಕೊಡಸೆ

**ಗ್ರಾಮೀಣ ಭಾಗದ ಎಷ್ಟೋ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶೌಚಾಲಯಗಳೇ ಇಲ್ಲ. ಶಾಲೆಗೊಂದು ಬಾವಿ ಒದಗಿಸಲು ಹಣ ಖರ್ಚಾಗಿರುತ್ತದೆ. ಆದರೆ ಬಾವಿಯೇ ಇರುವುದಿಲ್ಲ. ಅಲ್ಲಿ ಕೆಲಸ ಮಾಡಬೇಕಿರುವ ಶಿಕ್ಷಕಿಯರು ಕಷ್ಟ ಸಹಿಷ್ಣುಗಳಾಗಿದ್ದು ಮುಂದಿನ ಪ್ರಜೆಗಳನ್ನು ರೂಪಿಸುವ ಗುರುತರ ಹೊಣೆಯನ್ನು ನಿರ್ವಹಿಸಬೇಕು. ಇದು ವ್ಯವಸ್ಥೆಯ ಅಮಾನವೀಯ ಮುಖವನ್ನಷ್ಟೇ ಅಲ್ಲದೆ, ಮಾನವ ಹಕ್ಕು ಉಲ್ಲಂಘನೆಯಂಥ ಗಂಭೀರ ವರ್ತನೆಯೂ ಆಗಿದೆ.**

